ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ

ವಿಜಯಪುರ

ಕನ್ನಡ ಅಧ್ಯಯನ ವಿಭಾಗ

ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಮತ್ತು ಪಿ.ಲಂಕೇಶ ಅವರ ಕಥನ ಸಾಹಿತ್ಯದಲ್ಲಿ ಮಹಿಳೆ : ವಿಭಿನ್ನ ಆಯಾಮಗಳು

ಪಿಎಚ್.ಡಿ ಅಧ್ಯಯನಕ್ಕಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧದ

ಪೂರ್ವಭಾವಿ ಸಾರಲೇಖ

ಮಾರ್ಗದರ್ಶಕರು

ಡಾ॥ ನಾರಾಯಣ ಬಿ.ಪವಾರ

ಪ್ರಾಧ್ಯಾಪಕರು

ಕನ್ನಡ ಅಧ್ಯಯನ ವಿಭಾಗ

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ,

ವಿಜಯಪುರ

ಸಂಶೋಧಕರು

ಶ್ರೀಮತಿ ವನಜಾಕ್ಷಿ ಎಂ.

ಕನ್ನಡ ಅಧ್ಯಯನ ವಿಭಾಗ

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ,

ವಿಜಯಪುರ

೨೦೨೦

ಪರಿವಿಡಿ

ಅಧ್ಯಾಯ-೧

೧.೧ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧.೨ ಈವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ-೨ ಕನ್ನಡ ಕಥನ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ

ಅಧ್ಯಾಯ-೩ ಪೂರ್ಣಚಂದ್ರ ತೇಜಸ್ವಿ ಮತ್ತು ಪಿ.ಲಂಕೇಶ ಅವರ ಸಾಹಿತ್ಯಿಕ ಧೋರಣೆಗಳು

೩.೧ ಪೂರ್ಣಚಂದ್ರ ತೇಜಸ್ವಿ ಅವರ ಸಾಹಿತ್ಯಿಕ ಧೋರಣೆಗಳು

೩.೧.೧ ವಿಮರ್ಶಾ ಲೋಕ ಮತ್ತು ತೇಜಸ್ವಿ

೩.೧.೨ ಓದುಗರ ನೆಲೆಯಲ್ಲಿ ತೇಜಸ್ವಿ

೩.೧.೩ ತೇಜಸ್ವಿ ಮತ್ತು ವೈಜ್ಞಾನಿಕತೆ

೩.೧.೪ ತೇಜಸ್ವಿ ಅವರ ಸಾಹಿತ್ಯದಲ್ಲಿ ಹಾಸ್ಯಪ್ರಜ್ಞೆ

೩.೧.೫ ತೇಜಸ್ವಿ ಮತ್ತು ಪರಿಸರ ಪ್ರೀತಿ

೩.೨ ಪಿ.ಲಂಕೇಶ ಅವರ ಸಾಹಿತ್ಯಿಕ ಧೋರಣೆಗಳು

೩.೨.೧ ಪಿ.ಲಂಕೇಶ ಜೀವನ & ಸಾಹಿತ್ಯ

೩.೨.೨ ಲಂಕೇಶರ ರೀತಿ-ನೀತಿ

೩.೨.೩ ಲಂಕೇಶ ಮತ್ತು ಪತ್ರಿಕೆ

೩.೨.೪ ಲಂಕೇಶ ಮತ್ತು ಬಂಡಾಯ ಪ್ರಜ್ಞೆ

ಅಧ್ಯಾಯ-೪ ಕೆ.ಪಿ ಪೂರ್ಣಚಂದ್ರ ತೇಜಸ್ವಿ ಅವರ ಕಥನ ಸಾಹಿತ್ಯದಲ್ಲಿ ಮಹಿಳೆ

ಅಧ್ಯಾಯ-೫ ಪಿ ಲಂಕೇಶ ಅವರ ಕಥನ ಸಾಹಿತ್ಯದಲ್ಲಿ ಮಹಿಳೆ

ಅಧ್ಯಾಯ-೬ ಕೆ.ಪಿ ಪೂರ್ಣಚಂದ್ರ ತೇಜಸ್ವಿ ಮತ್ತು ಲಂಕೇಶ ಅವರ ತೌಲನಿಕ ನೋಟ

ಅಧ್ಯಾಯ-೭ ಸಮಾರೋಪ

ಗ್ರಂಥಋಣ

ಅಧ್ಯಾಯ-೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ :

ಕನ್ನಡ ಸಾಹಿತ್ಯದ ಪರಂಪರೆಯನ್ನು ಗಮನಿಸಿದಾಗ ಕಾಲದಿಂದ ಕಾಲಕ್ಕೆ ವಸ್ತು ಮತ್ತು ಅಭಿವ್ಯಕ್ತಿಯಲ್ಲಿ ಬದಲಾವಣೆಗಳಾಗಿದ್ದು ಅದನ್ನು ವಿವಿಧ ಘಟ್ಟಗಳಲ್ಲಿ ಗುರುತಿಸಬಹುದು. ಈ ದೃಷ್ಟಿಯಿಂದ ಆಧುನಿಕ ಕನ್ನಡ ಸಾಹಿತ್ಯದಲ್ಲಿ ನವೋದಯ, ಪ್ರಗತಿಶೀಲ, ನವ್ಯ, ದಲಿತ ಬಂಡಾಯ ಚಳುವಳಿಗಳು ತಮ್ಮ ಕೊಡುಗೆಗಳನ್ನು ಆಯಾ ಕಾಲಘಟ್ಟಗಳಲ್ಲಿ ನೀಡಿವೆ. ಇವುಗಳಲ್ಲಿ ಕಥನ ಸಾಹಿತ್ಯವು ಅತ್ಯಂತ ಸಮೃದ್ಧವಾಗಿ ಬೆಳೆದ ಸಾಹಿತ್ಯ ಪ್ರಕಾರಗಳಲ್ಲಿ ಪ್ರಮುಖವಾದುದಾಗಿದೆ.

ಪ್ರಸ್ತುತ ಅಧ್ಯಯನದ ವಸ್ತುವಾಗಿರುವ ಪೂರ್ಣಚಂದ್ರ ತೇಜಸ್ವಿ ಮತ್ತು ಪಿ.ಲಂಕೇಶರ ಕಥನ ಸಾಹಿತ್ಯದಲ್ಲಿ ಮಹಿಳೆಯರ ಪಾತ್ರವು ಪ್ರಮುಖವಾದುದು. ತೇಜಸ್ವಿ ವೃತ್ತಿಯಿಂದ ಕೃಷಿಕರಾಗಿ ಪ್ರವೃತ್ತಿಯಿಂದ ಉತ್ತಮ ಬರಹಗಾರರಾಗಿದ್ದಾರೆ. ತೇಜಸ್ವಿ ಅವರು ಯಮಳಪ್ರಶ್ನೆ ಎಂಬ ನಾಟಕವನ್ನು ಬರೆದಿದ್ದರೂ ಕತೆಗಾರರಾಗಿ, ಕಾದಂಬರಿಕಾರರಾಗಿ ಮುಖ್ಯವಾಗಿ ಕಾಣುತ್ತಾರೆ. ಈ ಲೇಖಕರು ತಮ್ಮ ಸಾಹಿತ್ಯದ ಮೂಲಕ ತರಲು ಪ್ರಯತ್ನಿಸಿದ ಸ್ತ್ರೀಯ ವಿಭಿನ್ನ ಆಯಾಮಗಳನ್ನು ಗುರುತಿಸುವುದು ಈ ಅಧ್ಯಯನದ ಉದ್ದೇಶವಾಗಿದೆ. ಪಿ.ಲಂಕೇಶರು ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಬರಹಗಾರರಾಗಿದ್ದಾರೆ. ಕಾವ್ಯ, ಕತೆ, ಕಾದಂಬರಿ, ನಾಟಕಗಳನ್ನು ಮೂಲಕ ಸಾಹಿತ್ಯ ಲೋಕದಲ್ಲಿ ಸ್ಮರಣೀಯರಾಗಿದ್ದಾರೆ. ಲಂಕೇಶ್ ಪತ್ರಿಕೆಯ ಮೂಲಕ ಪತ್ರಿಕಾರಂಗದಲ್ಲಿ ಖ್ಯಾತಿಯನ್ನು ಪಡೆದವರು. ಇಬ್ಬರಲ್ಲು ಕೆಲವು ಸಾಮ್ಯ ವೈಷಮ್ಯಗಳು ಇವೆ. ಈ ಇಬ್ಬರು ಲೇಖಕರು ಶೂದ್ರ ಹಿನ್ನಲೆಯಿಂದ ಬಂದವರು. ಇವರ ಕಥೆ ಹಾಗೂ ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಪ್ರಮುಖ ಸ್ತ್ರೀ ಪಾತ್ರಗಳನ್ನು ಚರ್ಚಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಪೂರ್ಣಚಂದ್ರ ತೇಜಸ್ವಿ ಮತ್ತು ಲಂಕೇಶ ಅವರ ಸಮಗ್ರ ಸಾಹಿತ್ಯವನ್ನು ಕೆಲವು ವಿದ್ವಾಂಸರು ಭಿನ್ನ ಭಿನ್ನ ನೆಲೆಯನ್ನು ವಿಶ್ಲೇಷಿಸಿದ್ದಾರಾದರೂ ಮತ್ತೆ ಮತ್ತೆ ಅವರ ಸಾಹಿತ್ಯ ಕೃತಿಗಳು ಚರ್ಚೆಗೆ ಒಳಪಡುವುದನ್ನು ಗಮನಿಸಿದರೆ ಅವರ ಕೃತಿಗಳಲ್ಲಿರುವ ಸತ್ಯವು ಮತ್ತಷ್ಟು ಚರ್ಚೆಗೆ ಅವಕಾಶ ನೀಡುತ್ತದೆ. ಈ ದೃಷ್ಟಿಕೋನದಿಂದ ಪೂರ್ಣಚಂದ್ರ ತೇಜಸ್ವಿ ಮತ್ತು ಲಂಕೇಶ ಅವರ ಕಥನ ಸಾಹಿತ್ಯದಲ್ಲಿ ಮಹಿಳೆ ವಿಭಿನ್ನ ಆಯಾಮಗಳು ವಿಷಯದಲ್ಲಿ ಸಂಶೋಧನೆ ಅಧ್ಯಯನವನ್ನು ಕೈಗೊಳ್ಳಲು ನಿರ್ಧರಿಸಲಾಯಿತು. ಈ ವಿಷಯದಲ್ಲಿ ಸಂಶೋಧನೆ ಕೈಗೊಳ್ಳಲು ಮಾರ್ಗದರ್ಶಕರೊಂದಿಗೆ ಚರ್ಚಿಸಲಾಗಿ ಅವರೂ ಸಹ ಈ ವಿಷಯದಲ್ಲಿ ಮಾರ್ಗದರ್ಶನ ಮಾಡಲು ಒಪ್ಪಿಕೊಂಡರು.

ವ್ಯಾಪ್ತಿ :

ಪೂರ್ಣಚಂದ್ರ ತೇಜಸ್ವಿ ಮತ್ತು ಪಿ.ಲಂಕೇಶ ಅವರು ಆಧುನಿಕ ಕನ್ನಡ ಸಾಹಿತ್ಯ ಲೋಕದ ಬಹುದೊಡ್ಡ ಲೇಖಕರು ಇವರ ಕಥೆ ಕಾದಂಬರಿಗಳನ್ನು ಇಲ್ಲಿನ ಸಂಶೋಧನೆ ಅಧ್ಯಯನವು ಒಳಗೊಂಡಿದೆ ಪಿ.ಲಂಕೇಶ ಅವರ ಐದು ಕಥಾಸಂಕಲನಗಳು ಮತ್ತು ಮೂರು ಕಾದಂಬರಿಗಳು ಹಾಗೂ ಪೂರ್ಣಚಂದ್ರ ತೇಜಸ್ವಿ ಅವರ ಕಥೆ ಕಾದಂಬರಿಗಳನ್ನು ಈ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿದ್ದೇನೆ. ಹೀಗೆ ಪೂರ್ಣಚಂದ್ರ ತೇಜಸ್ವಿ ಮತ್ತು ಪಿ.ಲಂಕೇಶ ಅವರ ಕಥೆ ಕಾದಂಬರಿಗಳಲ್ಲಿ ಬರುವ ಸ್ತ್ರೀ ಪಾತ್ರಗಳನ್ನು ಅಧ್ಯಯನ ಮಾಡುವುದು ಇಲ್ಲಿನ ವಿಷಯ ವ್ಯಾಪ್ತಿಯಾಗಿದೆ. ಈ ವಿಷಯ ವಸ್ತುವನ್ನು ಮಹಾಪ್ರಬಂಧದ ಆರು ಅಧ್ಯಯಗಳಲ್ಲಿ ಹೇಳಲಾಗಿದೆ. ಈ ಪ್ರಬಂಧವು ಒಟ್ಟು ಏಳು ಅಧ್ಯಯ'ಗಳನ್ನು ಒಳಗೊಂಡಿದೆ

ಮೊದಲನೆಯ ಅಧ್ಯಾಯದಲ್ಲಿ ಸಂಶೋಧನಾ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು ಕುರಿತಂತೆ ರೂಪರೇಷಗಳನ್ನು ನೀಡಲಾಗಿದೆ. ಎರಡನೆಯ ಉಪವಿಭಾಗದಲ್ಲಿ ತೇಜಸ್ವಿ ಮತ್ತು ಲಂಕೇಶರ ಸಾಹಿತ್ಯದ ಬಗ್ಗೆ ಇದುವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ ಇದೆ.

ಎರಡನೆಯ ಅಧ್ಯಾಯದಲ್ಲಿ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮಹಿಳೆಯರ ಸ್ಥಾನಗಳನ್ನು ಕುರಿತು ಚರ್ಚಿಸಲಾಗಿದೆ

ಮೂರನೆಯ ಅಧ್ಯಾಯದಲ್ಲಿ ಪೂರ್ಣಚಂದ್ರ ತೇಜಸ್ವಿ ಮತ್ತು ಪಿ.ಲಂಕೇಶರ ಸಾಹಿತ್ಯಿಕ ಧೋರಣೆಯ ನಿಲುವುಗಳನ್ನು ಕುರಿತು ವಿವರಿಸಲಾಗುವುದು.

ನಾಲ್ಕನೆಯ ಅಧ್ಯಾಯದಲ್ಲಿ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ ಕಥನ ಸಾಹಿತ್ಯದಲ್ಲಿ ವ್ಯಕ್ತವಾಗುವ ಮಹಿಳೆಯರ ವಿಭಿನ್ನ ಆಯಾಮಗಳನ್ನು ಗುರುತಿಸಲಾಗುವುದು.

ಐದನೆಯ ಅಧ್ಯಾಯದಲ್ಲಿ ಪಿ.ಲಂಕೇಶರವರ ಕಥನ ಸಾಹಿತ್ಯದಲ್ಲಿ ಚಿತ್ರವಾಗಿರುವ ಮಹಿಳೆಯರ ವಿಭಿನ್ನ ಆಯಾಮಗಳ ಮೂಲಕ ಚರ್ಚಿಸಲಾಗುವುದು.

ಆರನೆಯ ಅಧ್ಯಾಯದಲ್ಲಿ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಮತ್ತು ಲಂಕೇಶರ ಸಾಹಿತ್ಯದಲ್ಲಿನ ಸಾಮ್ಯತೆ ಮತ್ತು ವಿಭಿನ್ನತೆಗಳನ್ನು ತೌಲನಿಕವಾಗಿ ಅಧ್ಯಯನ ಮಾಡಲಾಗುವುದು.

ಏಳನೆಯ ಅಧ್ಯಾಯವು ಸಮಾರೋಪವನ್ನು ಒಳಗೊಂಡಿದ್ದು ಇದರಲ್ಲಿ ಇಡೀ ಅಧ್ಯಯನದ ಫಲಿತಗಳನ್ನು ನೀಡಲಾಗುವುದು.

ಅಧ್ಯಾಯ–೨
ಕನ್ನಡ ಕಥನ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ

ಪ್ರಾಚೀನ ಕನ್ನಡ ಸಾಹಿತ್ಯದಿಂದ ಆಧುನಿಕ ಕನ್ನಡ ಸಾಹಿತ್ಯದವರೆಗೂ ಅನೇಕ ಕವಿಗಳು ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಇಂತಹ ಸಾಹಿತ್ಯ ರಚನೆಯಲ್ಲಿ ಸ್ತ್ರೀಪರ ಆಲೋಚನೆಗಳು ಕಾಣಿಸಿಕೊಳ್ಳುವುದು ೨೦ ನೇಯ ಶತಮಾನದ ಪ್ರಾರಂಭದಲ್ಲಿ ಶಾಲಾ ಶಿಕ್ಷಣ ಪಡೆದ ಮತ್ತು ಸಾಹಿತ್ಯದಲ್ಲಿ ಸ್ವಲ್ಪ ಅಸಕ್ತಿ ಹೊಂದಿದ ಸ್ತ್ರೀಯರು ಅಲ್ಲಲ್ಲಿ ಕಾಣಸಿಗುತ್ತರಾದರೂ ಸಾಹಿತ್ಯ ಕ್ಷೇತ್ರಕ್ಕೆ ಕಾಲಿಡುವ ಧೈರ್ಯ ಮಾಡಿರಲಿಲ್ಲ. ಮಹಿಳೆಯರ ಪರವಾಗಿ ಪುರುಷರೇ ಬರೆಯಬೇಕಾದ ಸಂದರ್ಭವಿತ್ತು.

ಆ ಕಾಲದ ಕೆಲವು ಪತ್ರಿಕೆಗಳು ಮತ್ತು ಸಂಘಸಂಸ್ಥೆಗಳು, ಹೆಣ್ಣು ಮಕ್ಕಳ ಬರವಣಿಗೆಗೆ ಪ್ರಚೋದನೆ ನೀಡುವ ಉದ್ದೇಶದಿಂದ ಮಹಿಳೆಯರ ಬರಹಗಳಿಗೆ ಬಹುಮಾನಗಳನ್ನಿಟ್ಟು ಸ್ಪರ್ಧೆಗಿಳಿಸಿದವು. ಹೀಗೆ ಸ್ಪರ್ಧೆಗೆ ಬರೆಯುವ ಮೂಲಕ ಬರವಣಿಗೆಯ ಬದುಕು ಆರಂಭಿಸಿದ ಶಾಂತಾಬಾಯಿ, ನೀಲಗಾರ, ತಿರುಮಲಾಂಬಾ, ಮುಂತಾದವರು ನಿಬಂಧ, ಕಾದಂಬರಿ ಮತ್ತು ಲೇಖನಗಳನ್ನು ಬರೆದು ಬಹುಮಾನಗಳನ್ನು ಪಡೆದರು. ಹೀಗೆ ಬರೆಯಲು ಪ್ರಾರಂಭಿಸಿದ ಮಹಿಳೆಯರು ಸಾಹಿತ್ಯಲೋಕ ಪ್ರವೇಶ ಮಾಡಲು ಪ್ರಾರಂಭಿಸಿದರು. ತಿರುಮಲಾಂಬ, ಆರ್ ಕಲ್ಯಾಣಮ್ಮ, ಶ್ಯಾಮಲಾದೇವಿ, ಕೊಡಗಿನ ಗೌರಮ್ಮ, ಗಿರಿಬಾಲೆ, ಎಚ್.ವಿ.ಸಾವಿತ್ರಮ್ಮ ಇವರುಗಳು ತಮ್ಮ ಚಿಂತನೆ ಮತ್ತು ಬರಹಗಳಿಗೆ ತೊಡಗಿದರು.

ಅಧ್ಯಾಯ–೩
ಕೆ.ಪಿ ಪೂರ್ಣಚಂದ್ರ ತೇಜಸ್ವಿ ಮತ್ತು ಪಿ.ಲಂಕೇಶರ ಸಾಹಿತ್ಯಿಕ ಧೋರಣೆಗಳು

ಸಾಹಿತ್ಯವನ್ನು ಅರಿಯಬೇಕಾದರೆ ಸಾಹಿತಿಯು ಬದುಕಿದ ಪರಿಸರವನ್ನು ಕುರಿತು ಅಧ್ಯಯನ ಮಾಡಬೇಕಾಗುತ್ತದೆ. ಸಾಹಿತಿಯು ಜೀವನವನ್ನು ವಿಭಿನ್ನ ನೆಲೆಗಳಲ್ಲಿ ಕಾಣುತ್ತಾನೆ. ಆದ್ದರಿಂದ ಆತನ ಸಾಹಿತ್ಯದ ಮೂಲದ್ರವ್ಯ ಬದುಕಿನ ವಿವಿಧ ಮುಖಗಳನ್ನು ಚಿತ್ರಿಸುವುದಾಗಿದೆ. ಸಾಹಿತಿಯನ್ನು ತಿಳಿಯುವ ಮತ್ತು ಆತನ ಸಾಹಿತ್ಯವನ್ನು ಕುರಿತು ಅಧ್ಯಯನ ಮಾಡುವುದು ಪ್ರಸ್ತುತವಾಗುತ್ತದೆ. ಪೂರ್ಣಚಂದ್ರ ತೇಜಸ್ವಿ ಮತ್ತು ಪಿ.ಲಂಕೇಶ ಅವರ ಕಥನ ಸಾಹಿತ್ಯದಲ್ಲಿ ಮಹಿಳಾ ಸಂವೇದನೆಯನ್ನು ಕುರಿತು ಅಧ್ಯಯನ ಮಾಡುವುದಕ್ಕಿಂತ ಮೊದಲು ಸಾಹಿತಿಯ ಸಂಕ್ಷಿಪ್ತ ಪರಿಚಯ ಮತ್ತು ಸಾಹಿತ್ಯಿಕ ಧೋರಣೆಗಳನ್ನು ಸಂಕ್ಷಿಪ್ತವಾಗಿ ತಿಳಿದುಕೊಳ್ಳಬೇಕಾಗುತ್ತದೆ.

ಸಾಹಿತ್ಯವನ್ನು ವೃತ್ತಿಯಾಗಿ ತೆಗೆದುಕೊಳ್ಳದೆ ಹವ್ಯಾಸವನ್ನಾಗಿಸಿಕೊಂಡು ಅದರ ಮೌಲ್ಯ ಹೆಚ್ಚಿಸಲು ಅದರಲ್ಲಿ ಸಾರ್ಥಕತೆಯನ್ನು ಪಡೆಯಲು ಹಂಬಲಿಸುತ್ತಿರುವ ಒಬ್ಬ ಕತೆಗಾರರಾಗಿ ಪೂರ್ಣಚಂದ್ರ ತೇಜಸ್ವಿಯವರು ಕಾಣುತ್ತಾರೆ. ಶಿವಮೊಗ್ಗ ಜಿಲ್ಲೆಯ ಕುಪ್ಪಳಿಯವರಾದ ಇವರು ವೃತ್ತಿಯಲ್ಲಿ ಕೃಷಿಕರಾಗಿದ್ದು ಪ್ರವೃತ್ತಿಯಿಂದ ಕತೆಗಾರರು ಕಾದಂಬರಿಕಾರರಾಗಿದ್ದಾರೆ. ಗ್ರಾಮೀಣ ಜೀವನದ ದಟ್ಟವಾದ ಪ್ರಭಾವಕ್ಕೆ ಒಳಗಾಗಿ ಕಥಾರಚನೆಯಲ್ಲಿ ತೊಡಗಿರುವ ತೇಜಸ್ವಿ ಅವರ ಪಾತ್ರಗಳು ನೇರವಾಗಿ ಮೂಡಿಗೆರೆಯ ಮಣ್ಣಿನಿಂದ ಬಂದವುಗಳಾಗಿವೆ. ಅಸಮಾನತೆಯಿಂದ ತುಂಬಿ ತುಳುಕುತ್ತಿರುವ ಇಂದಿನ ಪರಿಸರದಲ್ಲಿ ಮಾನವೀಯ ಮೌಲ್ಯಗಳನ್ನು ಹುಡುಕುವ ಹೊಸ ಸಮಾಜವನ್ನು ಕಟ್ಟಬಯಸುವ ಕಾಳಜಿ ಇವರ ಸಾಹಿತ್ಯದ ಹಿಂದಿನ ಪ್ರಮುಖ ಧ್ವನಿಯಾಗಿದೆ. ಕತೆಗಳಿಗಾಗಿ ವಸ್ತುಗಳನ್ನು ಅರಸುತ್ತ ನಡೆಯದೆ ತಾವು ಕಂಡು ಅನುಭವಿಸಿದ ಸಂಗತಿಗಳಿಗೆ ಕಥಾರೂಪವನ್ನು ನೀಡುವುದು ಇವರ ಕಥಾ ತಂತ್ರವಾಗಿದೆ.

ತೇಜಸ್ವಿ ಅವರು ಚಮತ್ಕಾರಿಕವಾದ ಕಥನ ತಂತ್ರಗಳನ್ನು ಓದುಗರ ಮುಂದೆ ಬೆಚ್ಚಿ ಬೀಳುವಂತೆ ಮಾಡಲಿಲ್ಲ. ಬದಲಿಗೆ ಸರಳ ಮತ್ತು ಸಹಜವಾಗಿ ಕತೆ ಹೇಳುತ್ತಲೇ ಗ್ರಾಮೀಣ ಜೀವನದ ಒಳ ಮಗ್ಗಲುಗಳನ್ನು ವಾಸ್ತವತೆಯನ್ನು ಓದುಗರೆದುರು ಬಿಚ್ಚಿಟ್ಟರು. ಪರಿಸರಕ್ಕೆ ಸಂಬಂಧಿಸಿದಂತೆ ಉತ್ತಮ ವೈಜ್ಞಾನಿಕ ಕತೆಗಳ ರಚನೆಯನ್ನು ಮಾಡಿದ್ದಾರೆ. ತೇಜಸ್ವಿ ವೃತ್ತಿಯಲ್ಲಿ ಕೃಷಿಕರಾಗಿದ್ದರೂ ತಮ್ಮ ಅನೇಕ ಹವ್ಯಾಸ ಮತ್ತು ಪ್ರವೃತ್ತಿಗಳಿಂದ ಉತ್ತಮ ಸಣ್ಣಕತೆಯ ಬರಹಗಾರರಾಗಿದ್ದಾರೆ. ಛಾಯಾಗ್ರಾಹಕ, ಬೇಟೆಗಾರ, ವಿಚಾರವಾದಿ, ಕೃಷಿಕರಾಗಿ ಕನ್ನಡ ಸಾಹಿತ್ಯದ ಸೃಜನಶೀಲ ಲೇಖಕರಾಗಿ ಗುರುತಿಸಿಕೊಂಡಿದ್ದಾರೆ.

ಪಿ.ಲಂಕೇಶ

ನವ್ಯ ಸಾಹಿತ್ಯದ ಪ್ರಮುಖ ಕವಿ, ಕತೆಗಾರ, ಕಾದಂಬರಿಕಾರ ಹಾಗೂ ವಿಮರ್ಶಕ'ರಾದ ಪಿ.ಲಂಕೇಶ್ ಅವರು ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ. ಲಂಕೇಶರು ನವ್ಯೋತ್ತರ ಪೀಳಗೆಗೆ ಹೊರಳದರೂ ಕೂಡಾ ಮತ್ತೆ ನವ್ಯದ ಗೀಳಗೆ ಆಳವಾಗಿ ಇಳಯುವ ಪರಂಪರೆಯಲ್ಲಿ ಗುರುತಿಸಿಕೊಳ್ಳುವ ಲೇಖಕರಾಗಿ ಉಳದಿದ್ದಾರೆ.

ಇವರ ಕವನಗಳು 'ತಲೆಮಾರು' 'ಬಿಚ್ಚು', ಕಾದಂಬರಿಗಳು 'ಮುಸ್ಸಂಜೆಯ ಕಥಾಪ್ರಸಂಗ', 'ಬಿರುಕು', 'ಅಕ್ಕ' ಕತೆಗಳು 'ನಾನಲ್ಲ', 'ಕೆರೆಯನೀರನು ಕೆರೆಗೆ ಚೆಲ್ಲಿ' 'ಉಮಾಪತಿಯ ಸ್ಕಾಲರ್ ಶಿಪ್‌ಯಾತ್ರೆ' 'ಕಲ್ಲು ಕರಗುವ ಸಮಯ ಮತ್ತು ಇತರೆ ಕತೆಗಳು', ವಿಮರ್ಶಲೇಖನಗಳಾದ 'ಕಂಡದ್ದು ಕಂಡಹಾಗೆ', 'ಪ್ರಸ್ತುತ' ನಾಟಕಗಳು 'ಸಂಕ್ರಾಂತಿ' 'ತೆರೆಗಳು' 'ನನ್ನ ತಂಗಿಗೊಂದು ಗಂಡು ಕೊಡಿ' 'ಟಿ ಪ್ರಸನ್ನನ ಗೃಹಸ್ಥಾಶ್ರಮ' 'ಗುಣಮುಖ' ಚಲನ ಚಿತ್ರ ನಿರ್ದೇಶನ 'ಪಲ್ಲವಿ', 'ಅನುರೂಪ', 'ಖಂಡವಿದಿಕೋ ಮೌಂಸವಿದಿಕೋ', ಮುಂತಾದವು. ನಟ ನಿರ್ದೇಶಕ, ಮುದ್ರಕ, ಪ್ರಕಾಶಕ, ಕವಿ, ನಾಟಕಕಾರ, ಕಾದಂಬರಿಕಾರ, ಸಂಪಾದಕ ಹೀಗೆ ಹಲವು ಕ್ಷೇತ್ರಗಳಲ್ಲಿ ಗುರುತಿಸಿಕೊಂಡು ಮಹತ್ವದ ಲೇಖಕರ ಸಾಲಿನಲ್ಲಿ ನಿಲ್ಲುವ ಬಹುಮುಖಿ ವ್ಯಕ್ತಿತ್ವದ ಲಂಕೇಶ ಕನ್ನಡ ಸಾಹಿತ್ಯದ ಮಹತ್ವದ ಲೇಖಕರೆನ್ನಬಹುದು. ಲಂಕೇಶರಿಗೆ ಸಾಹಿತ್ಯದ ಬಗೆಗಿನ ತಮ್ಮ ಕಲ್ಪನೆಗಳು ಶಾಶ್ವತವು, ಸಾರ್ವತ್ರಿಕವೂ ಆದುದು ತಮ್ಮ ಸಾಹಿತ್ಯಕ ಮೌಲ್ಯಗಳನ್ನು ವಿಶಿಷ್ಟ ಅಭಿರುಚಿಯನ್ನು ಸಂಶಯಾತೀತ ಶ್ರದ್ಧೆಯ ಸ್ಥಿತಿ ಎಂದು ಭಾವಿಸಿರುವದರಿಂದ ಅವರ ಸಾಹಿತ್ಯ ಚಿಂತನೆಗೊಂದು ತೀವ್ರತೆ ಒದಗಿ ಬಂದಿದೆ. ಅವರ ಸಾಹಿತ್ಯ ಚಿಂತನೆಯ ಹಿಂದಿನ ನಿರ್ಮಾಪಕ ನಿರ್ಣಾಯಕ ಪರಿಕಲ್ಪನೆ ಸ್ವಭಾವಗಳನ್ನು ಪರಿಶೀಲಿಸಿದರೆ ಅವರ ಮೆಚ್ಚುಗೆ ಮತ್ತು ತೀವ್ರ ಟೀಕೆಗಳ ಹಿಂದಿನ ನೆಲೆಗಳು ನಮಗೆ ತಿಳಯುತ್ತವೆ.

ಲಂಕೇಶರ ಲೇಖನದಲ್ಲಿ ಎರಡು ರೀತಿಯ ಮಾದರಿಗಳವೆ. ಒಂದು ಮಾನಸಿಕ ಭಾವುಕ ಸ್ಥಿತಿಗಳ ಆದರ್ಶ ಮಾದರಿಗಳು ಎರಡು ಆದರ್ಶಮಾದರಿಗಳಾದ ವ್ಯಕ್ತಿಗಳು ಈ ಎಲ್ಲಾ ಆದರ್ಶಮಾದರಿಗಳೂ ಲಂಕೇಶರ ವೈಯಕ್ತಿಕ ವಿಮರ್ಶಾ ಪ್ರತಿಭೆಯ ಸೃಷ್ಟಿಗಳಾಗಿವೆ. ಗ್ರಾಮೀಣ ಸಮಾಜದ ಹೊಸ ಸಂವೇದನೆಯ ಯುವ ಜನರ ಅನುಭವಗಳನ್ನು ಚಿತ್ರಿಸುವುದು ಈ ಲೇಖಕರ ಒಂದು ವೈಶಿಷ್ಟವಾಗಿದೆ.

ಅಧ್ಯಾಯ–೪

ಕೆ.ಪಿ ಪೂರ್ಣಚಂದ್ರ ತೇಜಸ್ವಿ ಅವರ ಕಥನ ಸಾಹಿತ್ಯದಲ್ಲಿ ಮಹಿಳಾ ಚಿತ್ರಣ

ಪರಂಪರಾಗತ ಸಮಾಜದಲ್ಲಿ ಅನಾದಿಕಾಲದಿಂದಲೂ ಹೆಣ್ಣನ್ನು ನಿಂದನೆಗೆ ಅವಹೇಳನಕ್ಕೆ ಗುರಿ ಮಾಡುತ್ತಾ ಆಕೆಯನ್ನು ನಿರ್ಲಕ್ಷಿಸಿತ್ತು. ಇಂದಿನ ಆಧುನಿಕ ಸಮಾಜದಲ್ಲಿ ಪುರುಷರಿಗೆ ಸಮಾನವಾಗಿ ಸ್ತ್ರೀ ದುಡಿಯುತ್ತಿದ್ದಾಳೆ. ಹೆಣ್ಣು ಅನುಭವಿಸುವ ನೋವುಗಳನ್ನು ಚಿತ್ರಿಸುವಲ್ಲಿ ತೇಜಸ್ವಿ ವಿಶೇಷತೆಯನ್ನು ಮೆರೆದಿದ್ದಾರೆ.

ಇವರ ಕತೆಗಳಲ್ಲಿ ನಮಗೆ ಮುಖ್ಯವಾಗಿ ಸ್ತ್ರೀ ಕುರಿತಂತೆ ಕಾಣಿಸುವುದು ಶೋಷಣೆಯ ವಿರುದ್ಧ ಪ್ರತಿಭಟಿಸುವ ಶಕ್ತಿಯಾಗಿ ಗುರುತಿಸಬಹುದು. ಪ್ರಾರಂಭದ ಕಥಾಸಂಕಲನದ ಕಥೆಗಳಲ್ಲಿ ಬರುವ ಸ್ತ್ರೀ ಪಾತ್ರಗಳು ಪುರುಷನ ನಿಯಂತ್ರಣದಲ್ಲೇ ಬದುಕುವಂತವು. ನಂತರದ ಸಂಕಲನಗಳಾದ 'ಅಬಚೂರಿನ ಪೋಸ್ಟಾಫೀಸು' ಮತ್ತು ಕಿರಗೂರಿನ ಗಯ್ಯಾಳಿಗಳು ಇಲ್ಲಿನ ಸ್ತ್ರೀ ಪಾತ್ರಗಳು ಪುರುಷರ ಅಧೀನತೆಯನ್ನು ಪ್ರತಿಭಟಿಸುವಂತಹವುಗಳಾಗಿವೆ.

ಕಿರಗೂರಿನ ಗಯ್ಯಾಳಿಗಳು ಕಥೆಯ ಶೀರ್ಷಿಕೆಯು ಒಂದು ರೀತಿಯಲ್ಲಿ ಸ್ತ್ರೀ ಪರವಾದ ಪ್ರತಿಭಟನೆಯನ್ನು ಸೂಚಿಸುವಂತೆ ಲೇಖಕರು ಚಿತ್ರಿಸಿದ್ದಾರೆ. ಸ್ತ್ರೀವಾದಿ ನೆಲೆಯಲ್ಲಿಯೇ ಅಪಾರ ಕಾಳಜಿಗಳನ್ನು ತುಂಬಿಕೊಂಡು ಬರೆದ ಕತೆಯಾಗಿದೆ. ಕತೆಯಲ್ಲಿನ ಪ್ರಮುಖ ಪಾತ್ರವಾದ ದಾನಮ್ಮ ಸ್ತ್ರೀ ಪರಪ್ರತಿನಿಧಿಯಂತೆ ಕಾಣುತ್ತಾಳೆ. ಕತೆ ಪ್ರಾರಂಭವಾಗುವುದೇ ಕಿರಗೂರಿನ ಹೆಂಗಸರು ಗದ್ದೆ ನಾಟಿ ಮಾಡುವಾಗ ಅವರ ಜಗಳಗಳು ಬೈಯ್ಗುಳ ಅಲ್ಲಿನ ಸ್ತ್ರೀಯರ ವ್ಯಕ್ತಿತ್ವವನ್ನು ಪರಿಚಯಿಸುತ್ತದೆ. ಸ್ತ್ರೀಯರು ಪುರುಷರ ಎಲ್ಲ ದೌರ್ಜನ್ಯಗಳನ್ನು ಸಹಿಸಿಕೊಂಡರೆ ಸೌಮ್ಯ ವ್ಯಕ್ತಿತ್ವದವರಾಗಿರುತ್ತಿದ್ದರು. ಆದರೆ ಅದನ್ನೆ ಪ್ರತಿಭಟಿಸಿದರೆ ಸಮಾಜ ಅವಳಿಗೆ ಕೊಡುವ ಬಿರುದು ಬಜಾರಿಯಾಗಿತ್ತು. ಇದು ನಿಜಕ್ಕೂ ವಿಪರ್ಯಾಸವೆಂದೇ ಹೇಳಬಹುದು.

ತೇಜಸ್ವಿಯವರ ಕಥೆಗಳನ್ನು ಗಮನಿಸಿದಾಗ ಒಂದು ಸಮಾಜದ ಸುಧಾರಣೆಯ ಪ್ರತೀಕವಾಗಿ ಆಧುನಿಕತೆಯು ಪ್ರವೇಶವಾದಾಗ ಆಗುವ ಬದಲಾವಣೆಗಳನ್ನು ಹೇಗೆ ಸ್ವೀಕರಿಸಲಾಗುತ್ತದೆ ಎಂಬುದನ್ನು ಚಿತ್ರಿಸಿದ್ದಾರೆ. ಹೀಗೆ ಚಿತ್ರಿಸುತ್ತಲೇ ಮನುಷ್ಯನನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ.

ಅಧ್ಯಾಯ–೫

ಪಿ.ಲಂಕೇಶ ಅವರ ಕಥನ ಸಾಹಿತ್ಯದಲ್ಲಿ ಮಹಿಳಾ ಪಾತ್ರಚಿತ್ರಣ

ಕನ್ನಡದ ಪ್ರಮುಖ ಲೇಖಕರಲ್ಲಿ ಒಬ್ಬರಾದ ಪಿ.ಲಂಕೇಶರ ಕೃತಿಗಳ ಸ್ತ್ರೀವಾದಿ ಅಧ್ಯಯನವು ಈ ಪ್ರಬಂಧದ ಉದ್ದೇಶವಾಗಿದೆ. ಕಥನ ಸಾಹಿತ್ಯವನ್ನು ತೆಗೆದುಕೊಂಡಾಗ ಮೂರು ಕಾದಂಬರಿಗಳು ಮತ್ತು ಐದು ಕಥಾಸಂಕಲನಗಳನ್ನು ಪ್ರಕಟಿಸಿರುವ ಲಂಕೇಶ ಅವರ ಬರವಣಿಗೆಯು ವಿಸ್ತೃತವಾದುದಾಗಿದೆ. ಲಂಕೇಶರು ತೀವ್ರವಾದ ವ್ಯಕ್ತಿಪ್ರಜ್ಞೆಯಿಂದ ಬರೆಯುವ ಲೇಖಕರು ಆದ್ದರಿಂದ ಸೂಕ್ಷ್ಮಮನಸ್ಸಿನ ಗಂಡೊಬ್ಬನಿಗೆ ಹೆಣ್ಣು ಹೇಗೆ ಕಾಣುತ್ತಾಳೆ ಎಂಬುದರ ನೋಟವೊಂದು ಅವರ ಕತೆ ಕಾದಂಬರಿಗಳಲ್ಲಿ ಸಿಗುತ್ತದೆ. ತನಗಿಂತ ಭಿನ್ನವಾದ ಹೆಣ್ಣಿನ ದೇಹ ಗಂಡಿನಲ್ಲಿ ತುಂಬ ಕುತೂಹಲ ಹುಟ್ಟಿಸುತ್ತದೆ. ತೀವ್ರ ಕಾಮದ ಸಂದಂರ್ಭದಲ್ಲಿ ಹೆಣ್ಣು ಗಂಡಿಗೆ ಮೂರ್ತಗೊಳ್ಳುತ್ತಾಳೆ.

ಬದುಕನ್ನು ಮುನ್ನೆಡೆಸುವ ಜೀವನ್ಮುಖೀ ಜೀವಪರ ಮೌಲ್ಯಗಳನ್ನು ಹೆಣ್ಣಿನಲ್ಲಿ ಕಾಣಲಾಗಿದೆ. ಕಾಮದ ಸಂದಂರ್ಭದಲ್ಲಿ ಗಂಡು ಹೆಣ್ಣು ಪರಸ್ಪರ ಪ್ರಭಾವಶಾಲಿಯಾಗಿರುವಂತೆ ಲಂಕೇಶ ಚಿತ್ರಿಸಿದ್ದಾರೆ. ದಾಂಪತ್ಯದ ಆಯಾಮ ಸೋದರ ಸೋದರಿ ಸಂದರ್ಭಗಳಲ್ಲಿ ಹೆಣ್ಣಿನ ಪಾತ್ರವು ಗಮನ ಸೆಳೆಯುತ್ತದೆ. ಭಾಷೆಯನ್ನು ಅತ್ಯಂತ ಗಂಭೀರವಾಗಿ ತೆಗೆದುಕೊಂಡಿರುವ ಲಂಕೇಶ ತಮ್ಮ ನಿಷ್ಠುರ ಅಭಿವ್ಯಕ್ತಿಗೆ ಹೆಸರಾಗಿದ್ದಾರೆ. ಸವಕಲು ಪದಗಳನ್ನು ಬಿಟ್ಟು ಭಾಷೆಯನ್ನು ಅವರು ಮುರಿದು ಕಟ್ಟುವುದರಿಂದ ಹೊಸ ರೀತಿಯ ಉಪಮೆ ರೂಪಕಗಳು ಅವರಿಗೆ ಸಿಕ್ಕಿವೆ.

ನವ್ಯದ ವ್ಯಕ್ತಿ ಪ್ರಜ್ಞೆ ಮತ್ತು ಕಾಮದ ಪ್ರಾಮುಖ್ಯತೆಗಳಿಗೆ ಲಂಕೇಶರಲ್ಲಿ ಒಂದು ಉತ್ತಮ ಉದಾಹರಣೆ ಸಿಗುತ್ತದೆ. ಸಂಕೀರ್ಣಗೊಳ್ಳುವ ಸೂಕ್ಷ ಮನಸ್ಸಿನ ಪಾತ್ರಗಳು ಇಲ್ಲಿ ಕಾಣಸಿಗುತ್ತವೆ. ಸ್ಪೂರ್ತಿ ಸೃಷ್ಟಿಶೀಲತೆ ಜೀವಂತಿಕೆಗೆ ಮರಳುವುದು ಹೀಗೆ ಯಾವ ಕಾರಣಕ್ಕೆ ಆಗಲಿ ಹೆಂಗಸರನ್ನು ಭೋಗದೃಷ್ಟಿಯಿಂದ ನೋಡುವ ಕ್ರಮ ಇಲ್ಲಿ ಕಂಡುಬರುತ್ತದೆ. ಹೆಂಗಸಿನ ಬೇರೆ ಬೇರೆ ಆಯಾಮಗಳು ಈ ಪ್ರಧಾನ ದೃಷ್ಟಿಗೆ ಹೆದರಿ ಮರೆಯಾಗಿ ಹೋಗುತ್ತವೆ.

ಅಧ್ಯಾಯ–೬

ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಮತ್ತು ಲಂಕೇಶ ಅವರ ಸಾಹಿತ್ಯದ ತೌಲನಿಕ ನೋಟ

ಎರಡು ಕೃತಿಗಳನ್ನು ಹೋಲಿಸಿ ಅವುಗಳ ಮೌಲ್ಯ ಮಾಪನ ಮಾಡುವುದನ್ನು ತೌಲನಿಕ ಸಾಹಿತ್ಯ ಅಧ್ಯಯನ ಎನ್ನಬಹುದು ಟಿ.ಎಸ್.ಎಲಿಯತ್ ಹೇಳುವಂತೆ ಒಬ್ಬ ವಿಮರ್ಶಕನ ಎರಡು ಮುಖ್ಯ ಸಾಧನೆಗಳೆಂದರೆ ತುಲನೆ ಮತ್ತು ವಿಶ್ಲೇಷಣೆ ಅವನ ಪ್ರಕಾರ ಒಂದು ಕೃತಿ ತೌಲನಿಕೆಯ ಮೂಲಕ ವಿವರಣೆಯನ್ನು ಹೆಚ್ಚು ನಿಖರಗೊಳಿಸಬಹುದು.

ಎಲ್ಲಾ ಸಾಹಿತ್ಯ ಕೃತಿಗಳಿಗೂ ಒಂದರ್ಥದಲ್ಲಿ ವಿಶಿಷ್ಟವಾದವುಗಳೇ ಆದರೂ ಯಾವುದು ಯಾವುದಕ್ಕಿಂತ ಹೆಚ್ಚಾದುದು ಎಂಬ ಮಾತಂತೂ ಇದ್ದೇ ಇರುತ್ತದೆ. ಇಂಥ ನಿರ್ಣಯಕ್ಕೆ ಬರುವ ಒಂದು ಅಧ್ಯಯನದ ಪ್ರಕ್ರಿಯೆಯನ್ನೇ ನಾವು ತೌಲನಿಕ ಸಾಹಿತ್ಯ ಎಂದು ಕರೆಯುತ್ತೇವೆ. ಒಂದು ಉತ್ತಮ ಕೃತಿ ರಚನೆಗೊಂಡಿತೆಂದರೆ ಅದರ ಪ್ರಭಾವ ಇತರರ ಮೇಲೆ ನಿರಂತರವಾಗಿ ಆಗುತ್ತಲೇ ಇರುತ್ತದೆ. ಇಂತಹ ಪ್ರಭಾವದಿಂದ ಎರಡು ಕೃತಿಗಳ ತೌಲನಿಕ ಅಭ್ಯಾಸಯೋಗ್ಯವಾದುದು.

ತೌಲನಿಕ ಸಾಹಿತ್ಯಕ್ಕೆ ಸೀಮಿತತೆ ಎಂಬುದೇ ಇಲ್ಲ. ಮನಷ್ಯ ಭಾವನಾ ಪ್ರಪಂಚದ ಅಭಿವ್ಯಕ್ತಿ ಸಾಧ್ಯತೆಯಲ್ಲಿ ಯಾವ ಕವಿ ಹೆಚ್ಚು ಯಾವ ಕವಿ ಕಡಿಮೆ ಎಂಬ ತುಲನೆಯೊಂದಿಗೆ ಜಗತ್ತಿನ ಎಲ್ಲರನ್ನೂ ಬೆಲೆಗಟ್ಟುತ್ತಲೆ ಬಿಡುಗಡೆಯಾಗುವ ಒಂದು ಫಲಿತಾಂಶ ಸೃಷ್ಟಿಪಡಿಸುತ್ತದೆ. ಈ ಬಗೆಯ ಅಧ್ಯಯನವನ್ನು ಸರಳವಾದ ಅರ್ಥದಲ್ಲಿ ತೌಲನಿಕ ಸಾಹಿತ್ಯ ಎಂದು ಹೇಳಬಹುದು. ತೌಲನಿಕ ಸಾಹಿತ್ಯವು ಸಾಹಿತ್ಯಾಭ್ಯಾಸದ ಮಖ್ಯ ಕೇಂದ್ರ. ಆಧುನಿಕ ಕನ್ನಡ ಸಾಹಿತ್ಯದ ನವ್ಯಕಾಲ ಘಟ್ಟದ ಸಮಕಾಲೀನ ಲೇಖಕರಾದ ಪೂರ್ಣಚಂದ್ರ ತೇಜಸ್ವಿ ಮತ್ತು ಪಿ.ಲಂಕೇಶ್ ಅವರು ತೌಲನಿಕ ಸಾಹಿತ್ಯದ ನೆಲೆಗಟ್ಟಿನಲ್ಲಿ ಪ್ರಮುಖ ಲೇಖಕರಾಗಿ ನನ್ನ ಸಂಶೋಧನ ಅಧ್ಯಯನಕ್ಕೆ ಆಯ್ಕೆ ಮಾಡಿ ಕೊಳ್ಳಲಾಗಿದೆ.

ಅಧ್ಯಾಯ–೭

ಸಮಾರೋಪ

ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಮತ್ತು ಪಿ.ಲಂಕೇಶ್ ಅವರ ಕಥನ ಸಾಹಿತ್ಯದಲ್ಲಿ ಮಹಿಳೆ ಎಂಬ ವಿಷಯದಲ್ಲಿ ನಡೆಸುತ್ತಿರುವ ಅಧ್ಯಯನವು ಮಹತ್ವಪೂರ್ಣವಾದುದು ಇಲ್ಲಿನ ಲೇಖಕರು ಭಾರತೀಯ ಸಮಾಜದ ಬಹುಮುಖಗಳನ್ನು ಮತ್ತು ಅವುಗಳ ಸೂಕ್ಷ್ಮ ಚಿಂತನೆಯನ್ನು ಗ್ರಹಿಸುತ್ತಾರೆ. ಸಮಕಾಲೀನ ಕವಿಗಳೊಬ್ಬರ ಮುಖ್ಯ ನಿಲುವು ಮನುಷ್ಯನ ಮನಸ್ಸಿನ ವೇದನೆಗಳ ಮೂಲಕ ಸಾಮಾಜಿಕ ಅಂಶಗಳನ್ನು ಗುರುತಿಸುವ ತೇಜಸ್ವಿ ಬರಹಗಳು ಸಮಾಜದ ಬದಲಾವಣೆಗಳನ್ನು ತೋರಿಸುತ್ತವೆ. ನಾನು ಆಯ್ಕೆ ಮಾಡಿಕೊಂಡ ಈ ಅಧ್ಯಯನದ ಉದ್ದೇಶಿತ ವ್ಯಾಪ್ತಿ ಮತ್ತು ಉದ್ದೇಶವನ್ನು ಸಾಧಿಸುವಲ್ಲಿ ಉತ್ತಮ ಪ್ರಯತ್ನ ಮಾಡಲಾಗುವುದು.

ಪರಾಮರ್ಶನ ಗ್ರಂಥಗಳು

೧. ಅಶೋಕ ಟಿ.ಪಿ	:	ತೇಜಸ್ವಿ ಕಥನ ಅಕ್ಷರ ಪ್ರಕಾಶನ, ಹೆಗ್ಗೋಡು ಸಾಗರ, ೨೦೦೪.
೨. ಅಮೂರ.ಜಿ.ಎಸ್	:	ಕಥನ ಸಾಹಿತ್ಯ : ಸಣ್ಣಕಥೆ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೨೦೦೨.
೩. ಅಮೂರ.ಜಿ.ಎಸ್	:	ಸಾತ್ವಿಕ ಪಥ ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೧೯೯೫.
೪. ಆರ್ಕೆ	:	ವಾಸ್ತವ (ವಿಮರ್ಶೆ) ಬಂಡಾಯ ಕಥೆಗಳು: ಸಮೀಕ್ಷೆ ಹಗರಿಬೊಮ್ಮನಹಳ್ಳಿ, ೧೯೮೪.
೫. ಕರೀಗೌಡ.ಬೀಚನಹಳ್ಳಿ	:	ಶತಮಾನದ ಸಣ್ಣಕಥೆಗಳ ಸಮೀಕ್ಷೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೩.
೬. ನಾಯಕ ಜೆ.ಹೆಚ್	:	ಅನಿವಾರ್ಯ (ಸಾಹಿತ್ಯ ವಿಮರ್ಶೆ), ಅಕ್ಷರ ಪ್ರಕಾಶನ, ಸಾಗರ, ೧೯೮೦
೭. ಗಿರಡ್ಡಿ ಗೋವಿಂದರಾಜು	:	ಸಣ್ಣಕಥೆಯ ಹೊಸ ಒಲವುಗಳು, ಸಾಹಿತ್ಯ ಭಂಡಾರ, ಹುಬ್ಬಳ್ಳಿ, ೧೯೭೮

ಸಂಶೋಧನಾ ವಿದ್ಯಾರ್ಥಿನಿ
ವನಜಾಕ್ಷಿ.ಎಂ.

ಮಾರ್ಗದರ್ಶಕರು
ಡಾ: ನಾರಾಯಣ ಬಿ. ಪವಾರ